ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 19-04-1971.

*<u>ತ್ಯಾಗ, ತಪಸ್ಸು ಮತ್ತು ಸೇವೆಯ ಪರಿಭಾಷೆ</u>* (त्याग, तपस्या और सेवा की परिभाषा)

ಇಂದು ಭಟ್ಟಿಯ ಆರಂಭ ಮಾಡಲು ಕರೆದಿದ್ದೀರಿ. ಈ ಭಟ್ಟಿಯಲ್ಲಿ ಸರ್ವಗುಣಗಳ ಧಾರಣಾಮೂರ್ತಿ ಆಗಲು ಮತ್ತು ಸಂಪೂರ್ಣ ಮೂರ್ತಿ ಆಗಲು ಬಂದಿರುವಿರಿ. ಅದಕ್ಕಾಗಿ ಮೂರು ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು, ಅವು ಯಾವವು? ಆ ಮೂರು ಮಾತುಗಳಿಂದ ಸಂಪೂರ್ಣ ಜ್ಞಾನಮೂರ್ತಿ ಮತ್ತು ಸರ್ವ ಗುಣಮೂರ್ತಿ ಆಗಿಯೇ ಹೋಗುತ್ತೀರಿ. ಆ ಶಬ್ದಗಳು ಯಾವವು? ಒಂದು ತ್ಯಾಗ, ಎರಡನೇಯದು ತಪಸ್ಸು ಮತ್ತು ಮೂರನೇಯದು ಸೇವೆ. ಈ ಮೂರೂ ಶಬ್ದಗಳ ಧಾರಣಾ ಮೂರ್ತಿ ಆಗುವುದು ಅರ್ಥಾತ್ ಸಂಪೂರ್ಣ ಜ್ಞಾನಮೂರ್ತಿ ಮತ್ತು ಸರ್ವಗುಣಮೂರ್ತಿ ಆಗುವುದಾಗಿದೆ. ತ್ಯಾಗ ಎಂದು ಯಾವುದಕ್ಕೆ ಹೇಳುತ್ತಾರೆ? ನಿರಂತರ ತ್ಯಾಗ ಮೂರ್ತಿ ಮತ್ತು ತಪಸ್ವೀಮೂರ್ತಿಗಳಾಗಿ ಪ್ರತಿ ಕ್ಷಣ, ಪ್ರತಿ ಸಂಕಲ್ಪದ ಮೂಲಕ ಪ್ರತಿ ಆತ್ಮದ ಸೇವೆ ಮಾಡಬೇಕು. ಇದನ್ನು ಕಲಿಯಲು ಭಟ್ಟಿಗೆ ಬಂದಿರುವಿರಿ. ತ್ಯಾಗ ಮತ್ತು ತಪಸ್ಸು ಎರಡನ್ನೂ ತಿಳಿದುಕೊಂಡಿದ್ದೀರಿ, ಮತ್ತೆ ಈಗ ಏನು ಮಾಡಲು ಬಂದಿರುವಿರಿ? (ಕರ್ಮದಲ್ಲಿ ತರಲು) ಭಲೇ ನಿಮಗೆ ಗೊತ್ತಿದೆ ಆದರೆ ಈಗ ಏನು ತಿಳಿದುಕೊಂಡಿದ್ದೀರಿ ಅದರನುಸಾರ ನಡೆಯುವುದು, ಎರಡರಲ್ಲಿ ಸಮಾನತೆಯನ್ನು ತರಲು ಬಂದಿರುವಿರಿ. ಈಗ ತಿಳಿದುಕೊಳ್ಳುವುದರಲ್ಲಿ ಮತ್ತು ನಡೆಯುವುದರಲ್ಲಿ ಅಂತರ ಇದೆ. ಆ ಅಂತರವನ್ನು ಸಮಾಪ್ತಿ ಮಾಡಲು ಭಟ್ಟಿಗೆ ಬಂದಿರುವಿರಿ. ನಿಮ್ಮ ತ್ಯಾಗ ಮತ್ತು ತಪಸ್ಸಿನ ಆಕರ್ಷಣೆಯ ದೂರದಿಂದಲೇ ಪ್ರತ್ಯಕ್ಷವಾಗಿ ಕಂಡು ಬರುವಂತಹ ತಪಸ್ವೀ ಮೂರ್ತಿ ಮತ್ತು ತ್ಯಾಗಮೂರ್ತಿ ಆಗಬೇಕು. ಯಾವ ರೀತಿ ಸ್ಥೂಲ ಅಗ್ನಿ ಅಥವಾ ಪ್ರಕಾಶ ಅಥವಾ ಝಳ ದೂರದಿಂದ ಕಂಡುಬರುತ್ತದೆ ಮತ್ತು ಅನುಭವ ಆಗುತ್ತದೆ. ಅದೇ ರೀತಿ ನಿಮ್ಮ ತಪಸ್ಸು ಮತ್ತು ತ್ಯಾಗದ ಹೊಳಪು ದೂರದಿಂದ ಆಕರ್ಷಿತ ಮಾಡಬೇಕು. ಪ್ರತಿ ಕರ್ಮದಲ್ಲಿ ತ್ಯಾಗ ಮತ್ತು ತಪಸ್ಸು ಪ್ರತ್ಯಕ್ಷ ಕಂಡುಬರಬೇಕು. ಆಗ ಸೇವೆಯಲ್ಲಿ ಸಫಲತೆಯನ್ನು ಪಡೆಯಲು ಸಾಧ್ಯವಾಗುವುದು. ಕೇವಲ ಸೇವಾಧಾರಿಯಾಗಿ ಸೇವೆ ಮಾಡುವುದರಿಂದ ಯಾವ ಸಫಲತೆ ಸಿಗಬೇಕೋ ಅದನ್ನು ಪಡೆಯಲು ಆಗುವುದಿಲ್ಲ. ಆದರೆ ಸೇವಾಧಾರಿ ಆಗುವುದರ ಜೊತೆ ತ್ಯಾಗ ಮತ್ತು ತಪಸ್ವೀ ಮೂರ್ತಿ ಸಹ ಆಗಬೇಕು ಆಗ ಸೇವೆಯ ಪ್ರತ್ಯಕ್ಷ ಸ್ವರೂಪ ಕಂಡು ಬರುತ್ತದೆ. ಬಹಳ ಒಳ್ಳೆಯ ಸೇವಾಧಾರಿ ಅಂತೂ ಆಗಿರುವಿರಿ ಆದರೆ ಸೇವೆ ಮಾಡುವಾಗ ತ್ಯಾಗ ಮತ್ತು ತಪಸ್ಸನ್ನು ಮರೆಯಬಾರದು. ಮೂರೂ ಜೊತೆಯಲ್ಲಿದ್ದಾಗ ಪರಿಶ್ರಮ ಕಡಿಮೆ ಮತ್ತು ಪ್ರಾಪ್ತಿ ಅಧಿಕವಾಗಿರುತ್ತದೆ. ಸಮಯ ಕಡಿಮೆ ಸಫಲತೆ ಅಧಿಕ. ಈ ಮೂರನ್ನೂ ಜೊತೆಯಲ್ಲಿ ಜೋಡಿಸಬೇಕು. ಇದನ್ನು ಒಳ್ಳೆಯ ರೀತಿಯಲ್ಲಿ ಅಭ್ಯಾಸ ಮಾಡಿ ಹೋಗಿರಿ. ಎಷ್ಟು ಜ್ಞಾನಪೂರ್ಣರೋ ಅಷ್ಟು ಶಕ್ತಿಶಾಲಿ ಮತ್ತು ಸಫಲತಾಪೂರ್ಣ ಆಗಬೇಕು. ಜ್ಞಾನಪೂರ್ಣ ಆದವರ ಚಿಹ್ನೆ ಯಾವುದು ಕಂಡುಬರುತ್ತದೆ ಎಂದರೆ ಅವರ ಒಂದೊಂದು ಶಬ್ದ ಶಕ್ತಿಶಾಲಿಯಾಗಿರುತ್ತದೆ ಮತ್ತು ಪ್ರತಿ ಕರ್ಮ ಸಫಲತೆಯಿಂದ ಕೂಡಿರುತ್ತದೆ. ಈ ಎರಡೂ ಪರಿಣಾಮಗಳು ಕಡಿಮೆ ಇದ್ದರೆ ಜ್ಞಾನಪೂರ್ಣ ಆಗಬೇಕಾಗಿದೆ ಎಂದು ತಿಳಿಯಿರಿ. ಈಗಿನ ಕಾಲದ ಆತ್ಮರ ಮೂಲಕ ಸಿಗುವ ಅರ್ಧ ಜ್ಞಾನದಿಂದ ಸಹ ಅಲ್ಪ ಕಾಲಕ್ಕಾಗಿ ಸಫಲತೆಯ ಪ್ರಾಪ್ತಿಯ ಅನುಭವ ಮಾಡುತ್ತಾರೆ. ಆದ್ದರಿಂದ ಸಂಪೂರ್ಣ ಜ್ಞಾನದ ಪ್ರಾಪ್ತಿ ಪ್ರತ್ಯಕ್ಷ ಪ್ರಾಪ್ತಿ ಆಗುವ ಅನುಭವ ಈಗ ಮಾಡಬೇಕು. ಈ ಜ್ಞಾನ ಪ್ರಾಪ್ತಿ ಭವಿಷ್ಯದಲ್ಲಿ ಆಗುತ್ತದೆ ಎಂದು ತಿಳಿಯಬೇಡಿ. ಇಲ್ಲ. ವರ್ತಮಾನ ಸಮಯದಲ್ಲಿ ಜ್ಞಾನದ ಪ್ರಾಪ್ತಿಯಿಂದ ನಿಮ್ಮ ಪುರುಷಾರ್ಥದ ಸಫಲತೆ ಮತ್ತು ಸೇವೆಯ ಸಫಲತೆ ಆಗುತ್ತದೆ. ಸಫಲತೆಯ ಆಧಾರದಿಂದ ನಿಮ್ಮ ಜ್ಞಾನವನ್ನು ತಿಳಿದುಕೊಳ್ಳಲು ಸಾಧ್ಯ ಭಟ್ಟಿಯಲ್ಲಿ ಬಂದಿರುವುದು ಎಲ್ಲಿಯವರೆಗೆ ಜ್ಞಾನಪೂರ್ಣ ಆಗಿರುವಿರಿ ಎನ್ನುವುದನ್ನು ಪರಿಶೀಲನೆ ಮಾಡಿಕೊಳ್ಳಲು ಮತ್ತು ಮಾಡಿಸಿಕೊಳ್ಳಲು ಬಂದಿರುವಿರಿ. ಯಾವುದೇ ಹಳೆಯ ಸಂಕಲ್ಪ ಮತ್ತು ಸಂಸ್ಕಾರ ಕಂಡು ಬರಬಾರದು. ಇಷ್ಟು ತ್ಯಾಗ ಇಲ್ಲಿ ಕಲಿಯಬೇಕು. ಮಸ್ತಕ ಅರ್ಥಾತ್ ಬುದ್ಧಿಯ ಸ್ಮೃತಿ ಮತ್ತು ದೃಷ್ಟಿಯಿಂದ ಆತ್ಮಿಕ ಸ್ವರೂಪದ ಹೊರತಾಗಿ ಏನೂ ಕಾಣಬಾರದು ಅಥವಾ ಸ್ಮೃತಿಗೆ ಬರಬಾರದು. ಇಂತಹ ನಿರಂತರ ತಪಸ್ವಿ ಆಗಬೇಕು, ಯಾವುದೇ ಸಂಸ್ಕಾರ ಅಥವಾ ಸ್ವಭಾವದವರು ಇರಲಿ. ರಜೋಗುಣಿ,

ಅಥವಾ ತಮೋಗುಣಿ, ಇರಬಹುದು. ಸಂಸ್ಕಾರ ಮತ್ತು ಸ್ವಭಾವಕ್ಕೆ ವಶ ಆಗಿರಬಹುದು. ನಿಮ್ಮ ಪುರುಷಾರ್ಥದ ಪರೀಕ್ಷೆಯ ನಿಮಿತ್ತ ಆಗಿರಬಹುದು ಆದರೆ ಪ್ರತಿ ಆತ್ಮದ ಪ್ರತಿ ಸೇವೆ ಅರ್ಥಾತ್ ಕಲ್ಯಾಣದ ಸಂಕಲ್ಪ ಮತ್ತು ಭಾವನೆ ಉತನ್ನ ಆಗಬೇಕು. ಈ ರೀತಿ ಸರ್ವ ಆತ್ಮರ ಸೇವಾಧಾರಿ ಅರ್ಥಾತ್ ಕಲ್ಯಾಣಕಾರಿ ಆಗಬೇಕು. ಈಗ ತಿಳಿಯಿತೇ, ಎಂತಹ ತ್ಯಾಗ ಕಲಿಯಬೇಕು, ಎಂತಹ ತಪಸ್ಸು ಕಲಿಯಬೇಕು ಮತ್ತು ಸೇವೆ ಎಲ್ಲಿಯವರೆಗೆ ಮಾಡಬೇಕು?ಇದರ ಸೂಕ್ಷ್ಮತೆಯ ಅನುಭವ ಮಾಡಬೇಕು. ಪ್ರತಿ ಪುರುಷಾರ್ಥದಲ್ಲಿ ಫಲೀಭೂತ ಆಗಲು ಸಾಧ್ಯವಿದೆ. ಇದರಲ್ಲಿ ಜ್ಞಾನ ಮತ್ತು ಗುಣದ ಫಲ ಇದೆ ಈಗ ಬ್ರಹ್ಮಾಕುಮಾರ ಪ್ರಸಿದ್ಧ ಆಗಿದ್ದಾರೆ. ಇವರು ಬ್ರಹ್ಮಾಕುಮಾರ ಎಂದು ದೂರದಿಂದ ಗೊತ್ತಾಗುತ್ತದೆ. ಈಗ ಬ್ರಹ್ಮಾಕುಮಾರರ ಜೊತೆ ತಪಸ್ವೀಕುಮಾರ ಸಹ ದೂರದಿಂದ ಕಂಡು ಬರಬೇಕು, ಈ ರೀತಿ ಆಗಿ ಹೋಗಬೇಕು. ಇದು ಸಾಧ್ಯವಾಗುವುದು ಮನನ ಮತ್ತು ಮಗ್ನ ಎರಡರ ಅನುಭವ ಮಾಡಿದಾಗ.

ಸ್ಥೂಲ ನಶೆಯಲ್ಲಿರುವವರನ್ನು ದೂರದಿಂದ ನೋಡಿದಾಗ ಅವರ ಚಲನ-ವಲನದಿಂದ ಇವರು ನಶೆಯಲ್ಲಿದ್ದಾರೆ ಎಂದು ಗೊತ್ತಾಗುತ್ತದೆ. ಅದೇ ರೀತಿ ನಿಮ್ಮ ಚಲನೆ ಮತ್ತು ಚಹರೆಯಿಂದ ಈಶ್ವರೀಯ ನಶೆ ಮತ್ತು ನಾರಾಯಣೀ ನಶೆ ಕಾಣಿಸಬೇಕು. ನಿಮ್ಮ ಮುಖವೇ ನಿಮ್ಮ ಪರಿಚಯ ಕೊಡಬೇಕು. ಯಾರನ್ನಾದರೂ ಮಿಲನ ಮಾಡಲು ಹೋದಾಗ ಪರಿಚಯಕ್ಕಾಗಿ ನಿಮ್ಮ ಕಾರ್ಡ್ ಕೊಡುತ್ತೀರಲ್ಲವೆ. ಅದೇ ರೀತಿ ನಿಮ್ಮ ಮುಖ ಪರಿಚಯ ಕಾರ್ಡನ ಕರ್ತವ್ಯ ಮಾಡಬೇಕು. ತಿಳಿಯಿತೆ? ಈಗ ಗುಪ್ತ ಧಾರಣೆಯ ರೂಪ ಇರಬಾರದು. ಜ್ಞಾನ ಗುಪ್ತ ಇದೆ. ತಂದೆ ಗುಪ್ತ ಆಗಿದ್ದಾರೆ. ಆದ್ದರಿಂದ ಧಾರಣೆಯೂ ಗುಪ್ತವಾಗಿಯೇ ಇದೆ ಎಂದು ಕೆಲವರು ತಿಳಿಯುತ್ತಾರೆ. ಜ್ಞಾನ ಗುಪ್ತ ಇದೆ, ತಂದೆ ಗುಪ್ತ ಆಗಿದ್ದಾರೆ ಆದರೆ ಅವರಿಂದ ಯಾವ ಧಾರಣೆಯ ಪ್ರಾಪ್ತಿ ಆಗುತ್ತದೆಯೋ ಅದು ಗುಪ್ತವಾಗಿರಲು ಸಾಧ್ಯವಿಲ್ಲ. ಆದ್ದರಿಂದ ಧಾರಣೆಯನ್ನು ಮತ್ತು ಪ್ರಾಪ್ತಿಯನ್ನು ಪ್ರತ್ಯಕ್ಷವಾಗಿ ತೋರಿಸಿರಿ, ಆಗ ಪ್ರತ್ಯಕ್ಷತೆ ಆಗುತ್ತದೆ, ವಿಶೇಷವಾಗಿ ಕುಮಾರರಲ್ಲಿ ಇರುವ ಒಂದು ಸಂಸ್ಕಾರ ಪುರುಷಾರ್ಥದಲ್ಲಿ ವಿಘ್ನ ರೂಪವಾಗುತ್ತದೆ. ಅದು ಯಾವುದು? ಕಾಮನೆಗಳನ್ನು ಪೂರ್ಣ ಮಾಡಿಕೊಳ್ಳಲು ಸಂಸ್ಕಾರಗಳನ್ನು ಇಟ್ಟುಕೊಳ್ಳುವುದು ಕುಮಾರರ ಒಂದು ಸಂಸ್ಕಾರ. ಜೇಬು ಖರ್ಚಿಗೆ ಇಟ್ಟುಕೊಳ್ಳುತ್ತಾರಲ್ಲ ಹಾಗೆ, ಯಾವ ರೀತಿ ರಾಜರ ರಾಜ್ಯ ಬಿಟ್ಟು ಹೋಯಿತು ಆದರೆ ರಾಜಧನ ಬಿಡುವುದಿಲ್ಲ. ಎನ್ನುತ್ತಾರೋ ಅದೇ ರೀತಿ ಸಂಸ್ಕಾರಗಳನ್ನು ಎಷ್ಟೇ ಸಮಾಪ್ತಿ ಮಾಡಿದರೂ ಜೇಬು ಖರ್ಚಿನ ರೀತಿಯಲ್ಲಿ ಏನಾದರೂ ಅವಶ್ಯ ಇಟ್ಟುಕೊಳ್ಳುತ್ತಾರೆ. ಇದಾಗಿದೆ ಮುಖ್ಯ ಸಂಸ್ಕಾರ, ಇಲ್ಲಿ ಭಟ್ಟಿಯಲ್ಲಿ ಗೊತ್ತಿದೆ ಮತ್ತು ನಡೆಯುವಂತಹ ಧೈರ್ಯವನ್ನು ಮಾಡುತ್ತಾರೆ ಆದರೆ ಮಾಯೆ ರಾಜಧನದ ರೀತಿ ಅಲ್ಲಿ ಇಲ್ಲಿ ಉಳಿದುಕೊಳ್ಳುತ್ತದೆ. ತಿಳಿಯಿತೆ?

ಆದ್ದರಿಂದ ಈ ಭಟ್ಟಿಯಲ್ಲಿ ಎಲ್ಲವನ್ನೂ ತ್ಯಾಗ ಮಾಡಿ ಹೋಗಬೇಕು. ಸಂಪೂರ್ಣವಂತೂ ಅಂತ್ಯದಲ್ಲಿ ಆಗುತ್ತೇವೆ, ಅಂದ ಮೇಲೆ ಅಲ್ಪ ಸ್ವಲ್ಪ ಇರುತ್ತದೆ ಎಂದು ವಿಚಾರ ಮಾಡಬೇಡಿ. ಆದರೆ ಇಲ್ಲ. ತ್ಯಾಗ ಅಂದರೆ ತ್ಯಾಗ. ಜೇಬು ಖರ್ಚಿಗೆಂದು ಅಲ್ಪ ಸ್ವಲ್ಪ ಸಂಸ್ಕಾರ ನಿಮ್ಮಲ್ಲಿ ಉಳಿಯಲು ಬಿಡಬೇಡಿ, ತಿಳಿಯಿತೆ? ಸ್ವಲ್ಪ ಸಂಸ್ಕಾರವೂ ನಿಮ್ಮಲ್ಲಿದ್ದರೆ ಆ ಸಂಸ್ಕಾರ ಮೋಸ ಮಾಡುತ್ತದೆ. ಆದ್ದರಿಂದ ಹಳೆಯ ಆಸ್ತಿ ಏನಿದೆ, ಅದನ್ನು ಸಂಪೂರ್ಣ ಭಸ್ಮ ಮಾಡಿ ಹೋಗಿರಿ, ತಿಳಿಯಿತೆ? ಒಳ್ಳೆಯದು.

ಇದು ಕುಮಾರರ ಗುಂಪಾಗಿದೆ. ಈಗ ತಪಸ್ವೀ ಕುಮಾರ ಗುಂಪು ಆಗಬೇಕು. ಇವರು ತಪಸ್ವೀ ಕುಮಾರರು ತಪಸ್ವೀ ಭೂಮಿಗೆ ಬಂದಿದ್ದಾರೆ ಎನ್ನುವ ವಿಶೇಷತೆ ಕಂಡುಬರಬೇಕು. ಪ್ರತಿಯೊಬ್ಬರೂ ಪ್ರಕಾಶದ ಕಿರೀಟಧಾರಿಗಳಾಗಿ ಕಾಣಿಸಬೇಕು. ಕಿರೀಟಧಾರಿ ಭವಿಷ್ಯದಲ್ಲಿ ಆಗುತ್ತೀರಿ ಆದರೆ ಈ ಭಟ್ಟಿಯಿಂದ ಪ್ರಕಾಶದ ಕಿರೀಟಧಾರಿಯಾಗಿ ಹೋಗಬೇಕು. ಸೇವೆಯ ಜವಾಬ್ದಾರಿಯ ಕಿರೀಟ ಈ ಕಿರೀಟದ ಜೊತೆ ಸ್ವತಃ ಪ್ರಾಪ್ತಿ ಆಗುತ್ತದೆ. ಆದ್ದರಿಂದ ಪ್ರಕಾಶದ ಕಿರೀಟವನ್ನು ಧಾರಣೆ ಮಾಡುವುದರ ಕಡೆ ಮುಖ್ಯ ಗಮನ ಕೊಡಬೇಕು. ಯಾವ ರೀತಿ ತಪಸ್ವಿಗಳು ಆಸನದಲ್ಲಿ ಕುಳಿತುಕೊಳ್ಳುತ್ತಾರೆಯೋ ಅದೇ ರೀತಿ ನಿಮ್ಮ ಏಕರಸ ಆತ್ಮದ ಸ್ಥಿತಿಯ ಆಸನದಲ್ಲಿ ವಿರಾಜಮಾನ ಆಗಿರಿ. ಈ ಆಸನವನ್ನು ಬಿಡಬೇಡಿ, ಆಗ ಸಿಂಹಾಸನ ಸಿಗುತ್ತದೆ. ನಿಮ್ಮನ್ನು ನೋಡುತ್ತಿದ್ದಂತೆ ಎಲ್ಲರ ಮುಖದಿಂದ ಈ ಕುಮಾರರು ತಪಸ್ವೀ ಕುಮಾರರಾಗಿದ್ದಾರೆ ಎನ್ನುವ ಧ್ವನಿ ಬರಬೇಕು. ಪ್ರತಿಯೊಂದು ಕರ್ಮೇಂದ್ರಿಯಗಳಿಂದ

ದೇಹಾಭಿಮಾನದ ತ್ಯಾಗ ಮತ್ತು ಅತ್ಮಾಭಿಮಾನದ ತಪಸ್ಸು ಪ್ರತ್ಯಕ್ಷ ರೂಪದಲ್ಲಿ ಕಂಡು ಬರಬೇಕು. ಏಕೆಂದರೆ ಬ್ರಹ್ಮಾನ ಸ್ಥಾಪನೆಯ ಕಾರ್ಯ ನಡೆದೇ ಇದೆ. ಈಶ್ವರೀಯ ಪಾಲನೆಯ ಕರ್ತವ್ಯವೂ ನಡೆದಿದೆ. ಈಗ ಪ್ರಕಾಶದಲ್ಲಿ ತಪಸ್ಸಿನ ಮೂಲಕ ನಿಮ್ಮ ವಿಕರ್ಮ ಮತ್ತು ಪ್ರತಿ ಆತ್ಮದ ತಮೋಗುಣ ಮತ್ತು ಪ್ರಕೃತಿಯ ತಮೋಗುಣಿ ಸಂಸ್ಕಾರ ಭಸ್ಮ ಮಾಡುವ ಕರ್ತವ್ಯ ನಡೆಯಬೇಕು. ಈಗ ತಿಳಿಯಿತೆ ಯಾವ ಕರ್ತವ್ಯದ ಸಮಯ ಇದಾಗಿದೆ? ತಪಸ್ಸಿನ ಮೂಲಕ ತಮೋಗುಣವನ್ನು ಭಸ್ಮ ಮಾಡುವಂತಹದು. ಯಾವ ರೀತಿ ನಿಮ್ಮ ಚಿತ್ರದಲ್ಲಿ ಶಂಕರನ ರೂಪ ವಿನಾಶಕಾರಿ ಅರ್ಥಾತ್ ತಪಸ್ವೀ ರೂಪ ತೋರಿಸುತ್ತೀರಿ. ಅದೇ ರೀತಿ ಏಕರಸ ಸ್ಥಿತಿಯ ಆಸನದಲ್ಲಿ ಸ್ಥಿತರಾಗಿ ನಿಮ್ಮ ತಪಸ್ವೀ ರೂಪವನ್ನು ಪ್ರತ್ಯಕ್ಷದಲ್ಲಿ ತೋರಿಸಿರಿ. ಏನು ಕಲಿಯಬೇಕು ಮತ್ತು ಏನು ಮತ್ತು ಹೇಗೆ ಆಗಬೇಕು ಎನ್ನುವುದು ತಿಳಿಯಿತೆ? ಅದಕ್ಕಾಗಿ ಸಫಲತೆ ಸಿಗುವಂತೆ ಯಾವ ಮುಖ್ಯ ಸ್ಲೋಗನ್ ಈ ಕುಮಾರ ಗುಂಪಿನವರು ಮುಂದಿಟ್ಟುಕೊಳ್ಳುತ್ತೀರಿ? ಸತ್ಯತೆ ಮತ್ತು ಸ್ವಚ್ಛತೆಯಿಂದ ಈ ಸೃಷ್ಟಿಯ ವಿಕಾರವನ್ನು ತೊಡೆದು ಹಾಕುವುದು. ಯಾವಾಗ ಸೃಷ್ಟಿಯದು ಮಾಡುತ್ತೀರೆಂದರೆ ಸ್ವಯಂನಿಂದ ಅಂತೂ ಮೊದಲೇ ಆಗುತ್ತದೆ, ಆಗ ಮಾತ್ರ ಸೃಷ್ಟಿಯದು ಮಾಡಲು ಸ್ಲೋಗನ್ ನೆನಪಿಡುವುದರಿಂದ ಮತ್ತು ತಪಸ್ವೀ ಮೂರ್ತಿ ಆಗುವುದರಿಂದ ಸಾಧ್ಯವಾಗುವುದಲ್ಲವೆ. ಆದ್ದರಿಂದ ಈ ಸಫಲತಾ ಮೂರ್ತಿ ಆಗುವಿರಿ. ತಿಳಿಯಿತೆ? ಒಳ್ಳೆಯದು.

ಅವ್ಯಕ್ತ ಮುರಳಿ 19-04-1971.

***ತ್ಯಾಗ, ತಪಸ್ಸು ಮತ್ತು ಸೇವೆಯ ಪರಿಭಾಷೆ***

ಆತ್ಮಿಕ ಸ್ಥಿತಿಯಲ್ಲಿ ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತ್ಯಾಗ, ತಪಸ್ಸು, ಸೇವೆ ಈ ಮೂರನ್ನೂ ಧಾರಣೆ ಮಾಡಿರುವ ಸಂಪೂರ್ಣ ಜ್ಞಾನಮೂರ್ತಿ ಮತ್ತು ಸರ್ವ ಗುಣಮೂರ್ತಿ.

2. ನಾನು ಪ್ರತಿಕ್ಷಣ, ಪ್ರತಿ ಸಂಕಲ್ಪದಿಂದ ಸರ್ವಾತ್ಮರಿಗೆ ಸೇವೆಯನ್ನು ಮಾಡುವ ನಿರಂತರ ತ್ಯಾಗಿ ಮತ್ತು ತಪಸ್ವಿ ಮೂರ್ತಿ.

3. ನಾನು ತಿಳಿದುಕೊಳ್ಳುವುದು ಮತ್ತು ಪ್ರ್ಯಾಕ್ಟಿಕಲ್ ನಲ್ಲಿ ತರುವುದು ಈ ಎರಡಕ್ಕೆ ಇರುವ ವ್ಯತ್ಯಾಸವನ್ನು ಸಮಾಪ್ತಿ ಮಾಡಿದ್ದೇನೆ.

4. ನನ್ನ ಪ್ರತಿಯೊಂದು ಕರ್ಮವನ್ನು ತ್ಯಾಗಮೂರ್ತಿಯಾಗಿ ತಪಸ್ವಿ ಮೂರ್ತಿಯಾಗಿ ಮಾಡಿ, ಸಫಲತೆಯನ್ನು ಮತ್ತು ಸೇವೆಯ ಪ್ರತ್ಯಕ್ಷ ಫಲವನ್ನು ಪಡೆದಿದ್ದೇನೆ.

5. ನಾನು ತ್ಯಾಗ, ತಪಸ್ಸು, ಸೇವೆ - ಈ ಮೂರನ್ನು ಒಟ್ಟಿಗೆ ಧಾರಣೆ ಮಾಡಿ ಕಡಿಮೆ ಸಮಯದಲ್ಲಿ ಹೆಚ್ಚು ಸಫಲತೆಯನ್ನು ಪಡೆದಿದ್ದೇನೆ.

6. ನಾನು ನನ್ನ ಒಂದೊಂದು ಮಾತು ಶಕ್ತಿಶಾಲಿಯಾಗಿ ಮತ್ತು ಪ್ರತೀಕರ್ಮ ವಿಜಯಶಾಲಿಯಾಗಿ ಮಾಡುವ ಮಾಸ್ಟರ್ ಜ್ಞಾನ ಸಾಗರನು.

7. ನಾನು ನನ್ನ ಪುರುಷಾರ್ಥ ಮತ್ತು ಸೇವೆಯಲ್ಲಿ ಸಫಲತೆಯನ್ನು ಅನುಭವ ಮಾಡಿಕೊಂಡಿರುವ ಸಂಪೂರ್ಣ ಶ್ರೇಷ್ಠ ಜ್ಞಾನ ಸ್ವರೂಪ.

8. ನಾನು ಕೇವಲ ಆತ್ಮ ಸ್ವರೂಪನನ್ನು ನೋಡುವ ನಿರಂತರ ತಪಸ್ವಿ.

9. ನಾನು ಎಂತಹ ಸ್ವಭಾವ ಸಂಸ್ಕಾರವಿರುವವರನ್ನಾದರೂ, ರಜೋಗುಣಿ, ತಮೋಗುಣಿ ಆತ್ಮರನ್ನಾದರೂ, ಸ್ವಭಾವ ಸಂಸ್ಕಾರಗಳಿಗೆ ವಶವಾಗಿರುವವರನ್ನಾದರೂ, ನನ್ನ ಪುರುಷಾರ್ಥದ ಪರೀಕ್ಷೆಗೆ ನಿಮಿತ್ತವಾದವರನ್ನಾದರೂ, ಕಲ್ಯಾಣ ಭಾವನೆಯಿಂದ ನೋಡುವ ಕಲ್ಯಾಣಕಾರಿ.

10. ನಾನು ಮನನ ಮತ್ತು ಮಗ್ನ ಸ್ಥಿತಿಯಲ್ಲಿದ್ದು ಎಲ್ಲರಿಗೂ ದೂರದಿಂದಲೇ ತಪಸ್ವಿ ಮೂರ್ತಿಯಂತೆ ಕಾಣಿಸುತ್ತಿದ್ದೇನೆ.

11. ನನ್ನ ನಡವಳಿಕೆ ಮತ್ತು ನನ್ನ ಮುಖವು ಈಶ್ವರೀಯ ನಶೆ ಮತ್ತು ನಾರಾಯಣ ನಶೆ ತೋರಿಸುವಂತಹ ಸ್ವರೂಪವಾಗಿದೆ.

12. ನಾನು ನನ್ನ ಹಳೆಯ ಸಂಸ್ಕಾರಗಳೆಲ್ಲವುಗಳನ್ನು ಭಸ್ಮ ಮಾಡಿಕೊಂಡಿದ್ದೇನೆ.

13. ನಾನು ಸೇವಾ ಜವಾಬ್ದಾರಿಯನ್ನು ತೆಗೆದುಕೊಂಡ ಕಿರೀಟಧಾರಿ.

14. ನಾನು ಸದಾ ಏಕರಸ ಸ್ಥಿತಿ ಎಂಬ ಆಸನದ ಮೇಲೆ ವಿರಾಜಮಾನವಾಗಿ ಇದ್ದೇನೆ.